# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಸಿಡಿ/2149/2020/ಎ.ಆರ್.ಎಲ್.ಒ.-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 11/12/2020.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ*

ವಿಷಯ: ಶ್ರೀನಗರ, ರಾಘವೇಂದ್ರ ಬ್ಲಾಕ್, 7ನೇ ಮುಖ್ಯರಸ್ತೆ, ಮನೆ ನಂ.895ರ ನಿವೇಶನದಲ್ಲಿ ಬಿ.ಬಿ.ಎಂ.ಪಿ.ವತಿಯಿಂದ ಯಾವುದೇ ಪೂರ್ವಾನುಮತಿಯನ್ನು ಪಡೆಯದೆ ನಿಯಮಗಳನ್ನು ಉಲ್ಲಂಘನೆ ಮಾಡಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ತೆರವುಗೊಳಿಸುವ ಕುರಿತು.

****

ಶ್ರೀಮತಿ ಪಿ.ಶಶಿಕಲಾ, ಮನೆ ನಂ.894, ವೀರಭದ್ರಸ್ವಾಮಿ ನಿಲಯ, 7ನೇ ಮುಖ್ಯರಸ್ತೆ, ರಾಘವೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು (ಇನ್ನು ಮುಂದು "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ (1) ಶ್ರೀ ರಮೇಶ್, ಕಿರಿಯ ಅಭಿಯಂತರರು, ಮತ್ತು (2) ಶ್ರೀ ಸಂದೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗಿರಿನಗರ, ವಾರ್ಡ್ ನಂ.162, ಚನ್ನಮ್ಮನಕೆರೆ ಅಚ್ಚುಕಟ್ಟು ಉಪವಿಭಾಗ, ಬಿ.ಬಿ.ಎಂ.ಪಿ., ಬೆಂಗಳೂರು (ಇನ್ನು ಮುಂದೆ "ಎದುರುದಾರ ನಂ. 1 ಮತ್ತು 2" ಎಂದು ಕರೆಯಲ್ಪಡುತ್ತಾರೆ), ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರಾದ ಶ್ರೀಮತಿ ಪಿ.ಶಶಿಕಲಾ ರವರು ಎದುರುದಾರರಾದ- 1)ಶ್ರೀ ರಮೇಶ್, ಕಿರಿಯ ಅಭಿಯಂತರರು, ಗಿರಿನಗರ ವಾರ್ಡ್ ಸಂಖ್ಯೆ. 162, ಚನ್ನಮ್ಮನಕೆರೆ ಅಚ್ಚುಕಟ್ಟು ಉಪವಿಭಾಗ, ಬಿ.ಬಿ.ಎಂ.ಪಿ. ಬೆಂಗಳೂರು ಮತ್ತು 2)ಶ್ರೀ ಸಂದೀಪ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಿರಿನಗರ ವಾರ್ಡ್ ಸಂಖ್ಯೆ. 162, ಚನ್ನಮ್ಮನಕೆರೆ

ಅಚ್ಚುಕಟ್ಟು ಉಪವಿಭಾಗ, ಬಿ.ಬಿ.ಎಂ.ಪಿ. ಬೆಂಗಳೂರು ಇವರ ವಿರುದ್ಧ ದೂರು ದಾಖಲಿಸಿರುತ್ತಾರೆ.

3. **ದೂರಿನ ಸಂಕ್ಷಿಪ್ತ ಸಾರಾಂಶ:**– ದೂರುದಾರರ ಮನೆಯ ಪಕ್ಕದ ನಿವೇಶನ ಸಂಖ್ಯೆ.895 ರ ವಿಸ್ತೀರ್ಣ 30)(40 ಅಡಿಗಳು ಇರುತ್ತದೆ. ಸದರಿ ಆಸ್ತಿಯ ಮಾಲೀಕರು ಬಿ.ಬಿ.ಎಂ.ಪಿ. ವತಿಯಿಂದ ಯಾವುದೇ ಪೂರ್ವಾನುಮತಿಯನ್ನು ಪಡೆಯದೇ, ಅನುಮೋದಿತ ನಕ್ಷೆಯ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುವ ನಿಯಮಗಳನ್ನು ಉಲ್ಲಂಘನೆ ಮಾಡಿ, ಸೆಟ್‌ಬ್ಯಾಕ್ ಗಳನ್ನು ಬಿಡದೇ ಸದರಿ ಜಾಗದಲ್ಲಿ ಸುಮಾರು 5 ಅಂತಸ್ತಿನ ಮನೆ/ಕಟ್ಟಡವನ್ನು ನಿರ್ಮಿಸಿ ಲಿಫ್ಟ್‌ನ್ನು ಅಳವಡಿಸಿರುತ್ತಾರೆ ಎಂದು ಆರೋಪಿಸಿ, ಆಯುಕ್ತರು, ಬಿ.ಬಿ.ಎಂ.ಪಿ. ಕಚೇರಿ ಮತ್ತು ಎದುರುದಾರರಿಗೆ ದೂರು ನೀಡಿ ಕ್ರಮ ಕೈಗೊಳ್ಳುವಂತೆ ವಿನಂತಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿರುತ್ತಾರೆ.

4. ದಿನಾಂಕ: 10/11/2020 ರಂದು ಗೌರವಾನ್ವಿತ ಉಪಲೋಕಾಯುಕ್ತ–1 ರವರ ಮೌಖಿಕ ಆದೇಶದ ಮೇರೆಗೆ ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕಿಶೋರ್ ಭರಣಿ, ಪೊಲೀಸ್ ಉಪಾಧೀಕ್ಷಕರು–1 ರವರನ್ನು ನಿಯೋಜಿಸಿ, ವಿವಾದಿತ ಸ್ಥಳಕ್ಕೆ ಖುದ್ದು ಭೇಟಿ ನೀಡಿ, ಸದರಿ ಕಟ್ಟಡವನ್ನು ಪರಿಶೀಲಿಸಿ ಅದರ ಸೆಲ್ಲಾರ್, ಲಿಫ್ಟ್, ಸೆಟ್‌ಬ್ಯಾಕ್ ಹಾಗೂ ದೂರುದಾರರ ಮನೆಯ ಒಳಗೆ ನೀರು ಹರಿಯುವ ಕುರಿತು ಪರಿಶೀಲಿಸಿ ಮಹಜರ್ ಕ್ರಮವನ್ನು ಜರುಗಿಸಿ ಭಾವಚಿತ್ರಗಳೊಂದಿಗೆ ವಿಸ್ತೃತ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ಸದರಿ ತನಿಖಾಧಿಕಾರಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ಮತ್ತು ಅದರ ಜೊತೆಗೆ ಸ್ಥಳ ಮಹಜರ್, ಭಾವಚಿತ್ರಗಳನ್ನು ಸಲ್ಲಿಸಿರುತ್ತಾರೆ.

5. ಎದುರುದಾರರಿಂದ ಆಕ್ಷೇಪಣೆ ಮತ್ತು ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಯಿತು. ಅದರಂತೆ ದಿ: 11/11/2020 ರಂದು ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ಗಿರಿನಗರ ವಾರ್ಡ್ ಸಂಖ್ಯೆ.167ರ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ.895, 7ನೇ ಮುಖ್ಯರಸ್ತೆ, ರಾಘವೇಂದ್ರ ಬ್ಲಾಕ್, ಬೆಂಗಳೂರು ಈ ಕಟ್ಟಡದ ಮಾಲೀಕರಾದ ಶ್ರೀ ವಿ.ವೇಣುರವರು ವಾಸದ

ಕಟ್ಟಡ ನಿರ್ಮಿಸಲು ಬಿ.ಬಿ.ಎಂ.ಪಿ. ಸಹಾಯಕ ನಿರ್ದೇಶಕರು ರವರಿಂದ ದಿ: 24/07/2019 ರಂದು ಸ್ಟಿಲ್ಟ್, ನೆಲಮಹಡಿ, ಮೊದಲನೇ ಮಹಡಿ, 2ನೇ ಮಹಡಿ ಮತ್ತು ಟೆರೇಸ್ ಮಗಹಡಿಗೆ ನಕ್ಷೆ ಮಂಜೂರಾತಿ ಕೇಳಿರುತ್ತಾರೆ. ಆದರೆ ಸದರಿ ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುತ್ತಿದ್ದ ಹಿನ್ನೆಲೆಯಲ್ಲಿ ಕೆ.ಎಂ.ಸಿ. 1976ರ ಕಾಯ್ದೆಯ ಕಲಂ 321(1) ಮತ್ತು 321(2)ರ ಪ್ರಕಾರ ತಾತ್ಕಾಲಿಕ ಆದೇಶವನ್ನು ದಿ: 06/10/2020 ರಂದು ಜಾರಿ ಮಾಡಲಾಗಿರುತ್ತದೆ, ಸದರಿ ಅದೇಶದಂತೆ ಕಟ್ಟಡದ ಮಾಲೀಕರು ಅನಧಿಕೃತ ಭಾಗಗಳನ್ನು ತೆರವುಗೊಳಿಸಿಲ್ಲವಾದ ಕಾರಣ ಕಲಂ 321(3) ರ ಪ್ರಕಾರ ಸ್ಥಿರೀಕರಣ ಆದೇಶವನ್ನು 13/10/2020 ರಂದು ಹೊರಡಿಸಿ ಕಟ್ಟಡದ ಮಾಲೀಕರಿಗೆ ಜಾರಿ ಮಾಡಲಾಗಿರುತ್ತದೆ ಮತ್ತು ದಿ: 27/10/2020 ರಂದು ಕಾರ್ಯಪಾಲಕ ಅಭಿಯಂತರರ ಕಚೇರಿಯಿಂದ ಕಲಂ 462 ರ ಪ್ರಕಾರ ಆದೇಶವನ್ನು ಪಡೆಯಲಾಯಿತು. ನಂತರ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ 2019–20ರ ದರಪಟ್ಟಿಯಂತೆ ರೂ.6.75 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಕಚೇರಿಯ ಮುಖಾಂತರ ಸಕ್ಷಮ ಪ್ರಾಧಿಕಾರಕ್ಕೆ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿ ತಾವು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ, ಅದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕಾಗಿ ಕೋರಿರುತ್ತಾರೆ.

6. ಪ್ರಸ್ತುತ ಪ್ರಕರಣದಲ್ಲಿ, ದೂರಿನಲ್ಲಿ ಆರೋಪಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ ದೂರು ಅರ್ಜಿ ಮತ್ತು ಅದರೊಂದಿಗೆ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ದೂರುದಾರರ ಮನೆಯ ಪಕ್ಕದ ಸ್ವತ್ತಿನ ಸಂಖ್ಯೆ.895ರ ಮಾಲೀಕರು ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕರು (ನಗರ ಯೋಜನೆ–ದಕ್ಷಿಣ) ರವರಿಂದ ಎಲ್.ಪಿ.ಸಂಖ್ಯೆ.ಬಿ.ಬಿ.ಎಂ.ಪಿ. ಆಡಳಿತ–ಎಸ್.ಯು.ಟಿ.–0237/2019–20 ದಿ: 24/07/2019 ರಂದು ಸ್ಟಿಲ್ಟ್, ನೆಲಮಹಡಿ, ಮೊದಲನೇ ಮಹಡಿ, 2ನೇ ಮಹಡಿ ಮತ್ತು ಟೆರೇಸ್ ಮಹಡಿಗೆ ನಕ್ಷೆ ಮಂಜೂರಾತಿ ಪಡೆದುಕೊಂಡಿರುತ್ತಾರೆ. ಆದರೆ ಸದರಿ ನಕ್ಷೆಗೆ ವಿರುದ್ಧವಾಗಿ ಎರಡು ಹೆಚ್ಚುವರಿ ಮಹಡಿಗಳನ್ನು ಕಟ್ಟಿರುತ್ತಾರೆ. ಅಂದರೆ ಒಟ್ಟು 5 ಮಹಡಿಗಳನ್ನು ಕಟ್ಟಿರುವುದು ಛಾಯಾಚಿತ್ರಗಳಿಂದ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಈ ಕುರಿತು ದೂರುದಾರರು ದಿ: 03/10/2020 ರಂದು ಸಂಬಂಧಪಟ್ಟ

ಎದುರುದಾರರಿಗೆ ವಕೀಲರ ಮುಖಾಂತರ ನೋಟಿಸ್ ನೀಡಿರುತ್ತಾರೆ. ನಂತರ ದಿ: 09.09.2020 ರಂದು ಮತ್ತು 10.09.2020 ರಂದು ಉಪ ಆಯುಕ್ತರು ಮತ್ತು ಆಯುಕ್ತರು, ಬಿ.ಬಿ.ಎಂ.ಪಿ. ರವರಿಗೆ ಸದರಿ ಅನಧಿಕೃತ ಕಟ್ಟಡದ ಬಗ್ಗೆ ದೂರನ್ನು ನೀಡಿ ಕ್ರಮ ಕೈಗೊಳ್ಳುವಂತೆ ದೂರನ್ನು ಸಲ್ಲಿಸಿರುತ್ತಾರೆ. ಆದರೂ ಕೂಡ ಸದರಿ ಅನಧಿಕೃತ ಕಟ್ಟಡದ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

7. ಸದರಿ ಕಟ್ಟಡದ ವಸ್ತುಸ್ಥಿತಿಯನ್ನು ತಿಳಿದುಕೊಳ್ಳುವ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತ-1 ರವರು ದಿನಾಂಕ: 11/11/2020 ರಂದು ನೀಡಿದ ಮೌಕಿಕ ಆದೇಶದ ಮೇರೆಗೆ ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕಿಶೋರ್ ಭರಣಿ, ಪೊಲೀಸ್ ಉಪಾಧೀಕ್ಷಕರು-1 ಇವರನ್ನು ನಿಯೋಜಿಸಿ ವಿವಾದಿತ ಸ್ಥಳಕ್ಕೆ ಭೇಟಿ ನೀಡಿ ಕಟ್ಟಡವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ದಿ: 11/11/2020 ರಂದು ಸದರಿ ತನಿಖಾಧಿಕಾರಿಯವರು ವರದಿ ಸಲ್ಲಿಸಿರುತ್ತಾರೆ. ಅದರಲ್ಲಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.

> "ದೂರುದಾರರ ಮನೆಯ ಪಕ್ಕದಲ್ಲಿರುವ ಮನೆ ನಂ.895 ಕಟ್ಟಡವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಸದರಿ ಕಟ್ಟಡವನ್ನು ನಿರ್ಮಿಸಲು ಬಿ.ಬಿ.ಎಂ.ಪಿ. ಪೂರ್ವಾನುಮತಿಯನ್ನು ಪಡೆಯದೆ ಮತ್ತು ಅನುಮೋದಿತ ನಕ್ಷೆಯ ವಿರುದ್ಧವಾಗಿ ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಸದರಿ ಮನೆಯ ಮಾಲೀಕರು ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಸುಮಾರು 10 ಅಡಿ ಆಳದ ಸೆಲ್ಲರ್ ಅನ್ನು ನಿರ್ಮಿಸಿರುತ್ತಾರೆ. ಈ ಸೆಲ್ಲರ್‌ನಿಂದ ದೂರುದಾರರು ವಾಸಿಸುವ ಮನೆಗೆ ನೀರು ಸೋರಿಕೆಯಾಗುತ್ತಿರುವುದು ಕಂಡು ಬಂದಿರುತ್ತದೆ ಹಾಗೂ ಸೆಟ್‌ಬ್ಯಾಕ್ ಜಾಗದಲ್ಲಿ ಒಂದು ಶೌಚಾಲಯವನ್ನು ಮತ್ತು ಲಿಫ್ಟ್ ನಿರ್ಮಾಣಕ್ಕಾಗಿ ಗೋಡೆಯನ್ನು ನಿರ್ಮಿಸಿರುವುದರಿಂದ ದೂರುದಾರರ ಮನೆಯ ದೇವರ ಕೋಣೆಯಲ್ಲಿ ನೀರು ಸೋರಿಕೆಯಾಗುತ್ತಿರುವುದು ಕಂಡುಬಂದಿರುತ್ತದೆ.

ಮನೆಯ ಮಾಲೀಕರಾದ ಶ್ರೀಮತಿ ನವೀನಾ ಕೋಂ ವೇಣು ರವರು ಅನುಮೋದಿತ ನಕ್ಷೆಯ ವಿರುದ್ಧವಾಗಿ ಕಟ್ಟಡವನ್ನು ನಿರ್ಮಿಸುತ್ತಿರುವುದು ಕಂಡು ಬಂದಿದ್ದರೂ ಸಹ ಬಿ.ಬಿ.ಎಂ.ಪಿ. ಅಧಿಕಾರಿಗಳಾದ ಶ್ರೀ ರಮೇಶ್, ಜೂನಿಯರ್ ಇಂಜಿನಿಯರ್, ಶ್ರೀ ಸಂದೀಪ್, ಆಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಗಿರಿನಗರ ವಾರ್ಡ್ –162, ಉಪವಿಭಾಗದ ಕಚೇರಿ, ಬಿ.ಬಿ.ಎಂ.ಪಿ. ಚನ್ನಮ್ಮನಕೆರೆ ಅಚ್ಚುಕಟ್ಟು ರವರು ವ್ಯತಿರಿಕ್ತವಾಗಿ ನಿರ್ಮಾಣವಾದ ಕಟ್ಟಡವನ್ನು ತೆರವುಗೊಳಿಸುವ ಸಂಬಂಧ ಕೆ.ಎಂ.ಸಿ. ಕಾಯ್ದೆ 1976 ರಂತೆ ಕಲಂ 321(1) ಮತ್ತು 321(2) ರಡಿಯಲ್ಲಿ ತಾತ್ಕಾಲಿಕ ಆದೇಶ ಮತ್ತು ಸ್ಥಿರೀಕರಣ ಆದೇಶವನ್ನು ಹೊರಡಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರೂ, ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವಲ್ಲಿ ಕಾರ್ಯಾಚರಣೆಯನ್ನು ಕೈಗೊಳ್ಳದಿರುವುದು ಕಂಡು ಬಂದಿದ್ದು, ಇದರಲ್ಲಿ ಸದರಿ ಅಧಿಕಾರಿಗಳ ಕರ್ತವ್ಯಲೋಪವಾಗಿರುತ್ತದೆ.

ಶ್ರೀ ಸಂದೀಪ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಗಿರಿನಗರ ವಾರ್ಡ್–162, ಉಪವಿಭಾಗದ ಕಚೇರಿ, ಬಿ.ಬಿ.ಎಂ.ಪಿ. ಚನ್ನಮ್ಮನಕೆರೆ ಅಚ್ಚುಕಟ್ಟು ರವರು ಸದರಿ ವಿವಾದಿತ ಕಟ್ಟಡಕ್ಕೆ ಕುಡಿಯುವ ನೀರಿನ ಸಂಪರ್ಕ/ವಿದ್ಯುತ್ ಸರಬರಾಜು ಮಂಜೂರಾತಿಯನ್ನು ನೀಡಬಾರದೆಂದು ಪತ್ರ ವ್ಯವಹಾರ ನಡೆಸಿರುವುದು ಕಂಡು ಬಂದಿದ್ದರೂ, ವಿವಾದಿತ ಕಟ್ಟಡದ ಮಾಲೀಕರು ಈಗಾಗಲೇ ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕಗಳನ್ನು ಪಡೆದಿರುವುದು ಕಂಡುಬಂದಿರುತ್ತದೆ."

8. ಮೇಲಿನ ವರದಿಯನ್ನು ಮತ್ತು ಅದರೊಂದಿಗೆ ಲಗತ್ತಿಸಿರುವ ಫೋಟೋಗಳನ್ನು ಗಮನಿಸಿದಾಗ ಕಂಡು ಬರುವುದೇನೆಂದರೆ, ವಿವಾದಿತ ಮನೆಯ ಮಾಲೀಕರು 3 ಅಂತಸ್ತಿನ ಕಟ್ಟಡಕ್ಕೆ ನಕ್ಷೆಯನ್ನು ಪಡೆದುಕೊಂಡಿರುವುದು ಸರಿಯಷ್ಟೆ. ಆದರೆ ಸದರಿ ಕಟ್ಟಡವು 5 ಅಂತಸ್ತಿನ ಕಟ್ಟಡವಾಗಿರುತ್ತದೆ. ಅದು ಅನುಮೋದಿತ ನಕ್ಷೆಯ ವಿರುದ್ಧವಾಗಿ ಹೆಚ್ಚುವರಿ ಕಟ್ಟಡಗಳನ್ನು ಕಟ್ಟಿರುವುದು ಕಂಡು ಬಂದಿರುತ್ತದೆ ಹಾಗೂ ಸೆಟ್‌ಬ್ಯಾಕ್ ಜಾಗದಲ್ಲಿ ಒಂದು ಶೌಚಾಲಯ ಮತ್ತು ಲಿಫ್ಟ್‌ಗೆ

N. Anand

ಸಂಬಂಧಿಸಿದ ಗೋಡೆಯನ್ನು ನಿರ್ಮಿಸಿರುವುದರಿಂದ ದೂರುದಾರರ ಮನೆಯ ಗೋಡೆಯಲ್ಲಿ ನೀರು ಸೋರಿಕೆಯಾಗುತ್ತಿರುತ್ತದೆ. ಸದರಿ ಎಲ್ಲಾ ವಿಷಯಗಳ ಸಂಬಂಧ ದೂರುದಾರರು ಎದುರುದಾರರಿಗೆ ಲಿಖಿತ ರೂಪದಲ್ಲಿ ದೂರನ್ನು ಸಲ್ಲಿಸಿದರೂ ಸಹ ಯಾವುದೇ ಕ್ರಮವನ್ನು ಕೈಗೊಳ್ಳದೆ ನಿರ್ಲಕ್ಷ್ಯ ತೋರಿಸಿರುತ್ತಾರೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ದೂರುದಾರರ ಪಕ್ಕದ ಸ್ವತ್ತಿನ ಸಂಖ್ಯೆ.895 ರ ಮಾಲೀಕರು ಬಿ.ಬಿ.ಎಂ.ಪಿ. ವತಿಯಿಂದ 3 ಅಂತಸ್ತಿನ ಕಟ್ಟಡಕ್ಕೆ ನಕ್ಷೆಯನ್ನು ಪಡೆದುಕೊಂಡಿದ್ದು, ಕಟ್ಟಡ ನಿರ್ಮಿಸಿರುತ್ತಾರೆ. ಅನುಮೋದಿತ ನಕ್ಷೆಯ ವಿರುದ್ಧವಾಗಿ ಹೆಚ್ಚುವರಿ 5 ಅಂತಸ್ತಿನ ಕಟ್ಟಡ ಕಟ್ಟಿದ್ದು ಹಾಗೂ ಸೆಟ್‌ಬ್ಯಾಕ್ ಜಾಗದಲ್ಲಿ ಒಂದು ಶೌಚಾಲಯ ಮತ್ತು ಲಿಫ್ಟ್‌ಗೆ ಸಂಬಂಧಿಸಿದ ಗೋಡೆಯನ್ನು ನಿರ್ಮಿಸಿರುವುದರಿಂದ ದೂರುದಾರರ ಮನೆಯ ಗೋಡೆಯಲ್ಲಿ ನೀರು ಸೋರಿಕೆಯಾಗುತ್ತಿರುತ್ತದೆ. ಆದ್ದರಿಂದ ಸದರಿ ಹೆಚ್ಚುವರಿ ಕಟ್ಟಿರುವ ಕಟ್ಟಡಗಳನ್ನು ತೆರವುಗೊಳಿಸಲು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ) 11/12

ಉಪಲೋಕಾಯುಕ್ತರು-1,

ಕರ್ನಾಟಕ ರಾಜ್ಯ.